ಹೆಚ್ಚಿನ ಆದ್ಯತೆ ಮೇರೆಗೆ ತಮ್ಮ ಅನಿಸಿಕೆಯನ್ನು ಗಮನದಲ್ಲಿಟ್ಟುಕೊಂಡು ನಾಗರೀಕರಿಗೆ ಕನಿಷ್ಠ ಸೌಲಭ್ಯಗಳನ್ನು ಕೊಡತಕ್ಕಂಥ ಒಂದು ಯತ್ನ ಏನು ನಡೆದಿಲ್ಲ. ಅದನ್ನು ಕೊಡಲಿಕ್ಕೆ ಪ್ರಾಮಾಣಿಕ ವಾದಂಥ ಪ್ರಯತ್ನವನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪರಿಕಲ್ ಎಂ. ಮಲ್ಲಪ್ಪ —ಮಾನ್ಯ ಅಧ್ಯಕ್ಷರೇ, ಈ ಕೊಳಚೆ ಪ್ರದೇಶಗಳು ಇದೇ ರೀತಿ ಯಾಷ ಸರ್ಕಾರ ಬಂದರೂ ಕೂಡಾ ಅದೇ ರೀತಿಯಲ್ಲಿ ಮುಂದುವರಿಯುತ್ತಿವೆ. ದಯವಿಟ್ಟು ನನ್ನ ಎರಡನೇ ಪ್ರಶ್ನೆಗೆ ಕೊಳಚೆ ಪ್ರದೇಶಗಳು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಬರುತ್ತವೆ ಎಂದು ಹೇಳಿದ್ದೀರಿ, ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಏನು ಕೆಲಸವನ್ನು ಮಾಡುತ್ತಿಲ್ಲ. ಅವರು ಕೇಳುವುದೇನೆಂದರೆ ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಅವರಿಗೆ ಕೊಟ್ಟಿದ್ದೀರಿ. ಅವರ ಸಂಬಳಕ್ಕಾಗಿಯೇ ಒಂದು ಕೋಟಿ ರೂಪಾಯಿ ಆಗುತ್ತದೆ. ಇನ್ನು ಎಪ್ಪತ್ತು ಲಕ್ಷ ರೂಪಾಯಿಗಳಲ್ಲಿ ಇಡೀ ಕರ್ನಾಟಕಕ್ಕಾಗಿ ಏನೂ ಕೆಲಸವನ್ನು ಮಾಡುತ್ತಿಲ್ಲ, ಇಲ್ಲದಿದ್ದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಸರಿಯಾಗಿ ಫಂಡ್ಸ್‌ನ್ನು ಕೊಟ್ಟು ನಡೆಸಿ, ಇಲ್ಲದಿದ್ದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನ್ನು ಕ್ಲೋಸ್ ಮಾಡಿ ಅಲ್ಲಿರುವ ಆಫೀಸಿಯಲ್ಸ್‌ನ್ನು ಬೇರೆ ಡಿಪಾರ್ಟ್‌ಮೆಂಟಿಗೆ ಅವರನ್ನು ತೆಗೆದುಕೊಂಡುಬಿಡಿ. ಕೊಳಚೆ ಪ್ರದೇಶಗಳು ಕೆಲವು ಕಾರ್ಪೊರೇಷನ್‌ಗೆ ಸೇರುತ್ತವೆ ಎಂದು ಹೇಳಿದರೆ, ಕಾರ್ಪೊರೇಷನ್‌ನವರು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಸೇರುತ್ತವೆ ಎಂದು ನಾವು ಅಲ್ಲಿ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳುತ್ತಾರೆ. ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಅದು ಕಾರ್ಪೊರೇಷನ್‌ಗೆ ಸೇರುತ್ತದೆ, ನಾವು ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ಒಬ್ಬರಿಗೊಬ್ಬರು ಕೆಲಸವನ್ನು ಮಾಡದೇ ಕೊಳಚೆ ಪ್ರದೇಶಗಳು ಅದೇ ರೀತಿ ಉಳಿದಿದೆ. ಇದಕ್ಕಾಗಿ ತಾವೇನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ದೀರ್ಘ ವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದಂತೆ, ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದಂತೆ ಮತ್ತು ಕೊಳಚೆ ನಿರ್ಮೂಲನಾ ಮಂಡಲಿಗೆ ಸೇರಿದಂತೆ ಕೆಲವು ಕೊಳಚೆ ಪ್ರದೇಶಗಳು ಇವೆ. ಕೊಳಚೆ ನಿರ್ಮೂಲನಾ ಮಂಡಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮಾನ ಸದಸ್ಯರು ಹೇಳಿದ್ದಾರೆ. ಸರಿಯಾಗಿ ಅದು ಕೆಲಸ ಮಾಡದಿದ್ದರೆ ಅದನ್ನು ಚುರುಕು ಗೊಳಿಸಿ ಅದು ಸರಿಯಾಗಿ ಕೆಲಸ ಮಾಡದಿದ್ದರೆ, ಅದನ್ನು ತರಾಟೆಗೆ ತೆಗೆದುಕೊಳ್ಳುತಕ್ಕಂಥ ಸಾಮರ್ಥ್ಯ ಸರ್ಕಾರಕ್ಕೆ ಇದೆ ಎಂಬ ಭರವಸೆಯನ್ನು ಈ ವರ್ಷದಿಂದ ನಾನು ತಮಗೆ ಕೊಡುತ್ತೇನೆ.

ಅಧ್ಯಕ್ಷರು...ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವಿ. ರಾಜಶೇಖರಮೂರ್ತಿ. (ಹಣಕಾಸು ಸಚಿವರು).— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಆರನೆಯ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಾವಣಗೆರೆ ನಗರಗದಲ್ಲಿ ನೀರಿನ ತೊಂದರೆ

೪೨೭. ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದಾವಣಗೆರೆ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.